**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಒಂಭತ್ತನೇ ಅಧಿವೇಶನ**

# ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ – 04)**

ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಅಧಿನಿಯಮ, 1959ನ್ನು (1959ರ ಕರ್ನಾಟಕ ಅಧಿನಿಯಮ 20) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**–(1) ಈ ಅಧಿನಿಯಮವನ್ನು ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 9ನೇ ಪ್ರಕರಣದ ತಿದ್ದುಪಡಿ.**– ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 20) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 9ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**9. ಕೋರಂ.**– ಆಯೋಗದ ಸಭೆಗೆ, ಅಧ್ಯಕ್ಷನನ್ನು ಹೊರತುಪಡಿಸಿ, ಆಯೋಗದಲ್ಲಿ ಸೇವೆ ಸಲ್ಲಿಸುತ್ತಿರುವ ಸದಸ್ಯರುಗಳ ಶೇಕಡಾ ಐವತ್ತರಷ್ಟು ಕೋರಂ ಆಗಿರತಕ್ಕದ್ದು. ಆದರೆ, ಯಾವೊಬ್ಬ ಸದಸ್ಯನ ಗೈರುಹಾಜರಿಯ ಕಾರಣದಿಂದ ಯಾವುದೇ ಸಭೆಯ ವ್ಯವಹರಣೆಯನ್ನು ಸುಗಮವಾಗಿ ನಡೆಸಲು

ಸಾಧ್ಯವಿಲ್ಲವೆಂದು ಪ್ರಿಸೈಡಿಂಗ್ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಆ ಯಾವುದೇ ವ್ಯವಹರಣೆಯನ್ನು ಮುಂದೂಡಬಹುದು."

**3. 13ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 13ನೇ ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಗೆಜೆಟೆಡ್ ಪ್ರೊಬೆಷನರುಗಳ ನೇಮಕಾತಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಗೆಜೆಟೆಡ್ ಪ್ರೊಬೆಷನರುಗಳ ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ನಿಯಮಗಳಲ್ಲಿ ನಿಯಮಿಸಲಾದ ಅಂಥ ವಿಧಾನದಲ್ಲಿ ಮತ್ತು ಅಂಥ ಪ್ರಕ್ರಿಯೆಯ ಮೂಲಕ ಸಂದರ್ಶನವನ್ನು ನಡೆಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಅಧಿನಿಯಮ, 1959ನ್ನು, ಈ ಮುಂದಿನವುಗಳಿಗಾಗಿ, ಎಂದರೆ:-

(ಎ) ಆಯೋಗದ ಸಭೆಗೆ, ಅಧ್ಯಕ್ಷನನ್ನು ಹೊರತುಪಡಿಸಿ, ಕೋರಂ ಅನ್ನು ನಿಗದಿಪಡಿಸುವುದು;

(ಬಿ) ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿಗಾಗಿ ಆಯೋಗವು ಸಂದರ್ಶನವನ್ನು ನಡೆಸುವ ವಿಧಾನ ಮತ್ತು ಅನುಸರಿಸಬೇಕಾದ ಪ್ರಕ್ರಿಯೆ,

- ಇವುಗಳಿಗೆ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಅನುಬಂಧ

**ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಅಧಿನಿಯಮ, 1959ರ ಉದ್ಧೃತ ಭಾಗ**

**xxx** **xxx** **xxx**

**9. ಕೋರಂ.**- ಆಯೋಗದ ಸಭೆಗೆ ನಾಲ್ಕು ಕೋರಂ ಆಗಿರತಕ್ಕದ್ದು. ಆದರೆ, ಯಾವುದೇ ಸಭೆಯ ಕಾರ್ಯಕಲಾಪವನ್ನು ಯಾರೇ ಸದಸ್ಯನ ಗೈರುಹಾಜರಿಯ ಕಾರಣ ಸುಗಮವಾಗಿ ನಡೆಸಲು ಸಾಧ್ಯವಿಲ್ಲವೆಂದು ಪ್ರಿಸೈಡಿಂಗ್ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಆ ಕಾರ್ಯಕಲಾಪವನ್ನು ಮುಂದೂಡಬಹುದು.

**xxx** **xxx** **xxx**

**13. ಸಂದರ್ಶನಗಳು.**- ಆಯೋಗವು ನೇಮಕಾತಿಗಳಿಗಾಗಿ ಅಭ್ಯರ್ಥಿಗಳ ಸಂದರ್ಶನ ನಡೆಸುವಾಗ, ಆಯೋಗವು ಅಧಿಕಾರ ನೀಡಿದ ಇಬ್ಬರು ಅಥವಾ ಹೆಚ್ಚು ಸದಸ್ಯರು ಸಂದರ್ಶನವನ್ನು ನಡೆಸಬಹುದು ಮತ್ತು ಅಂಥ ಸಂದರ್ಶನದ ಫಲಿತಾಂಶಗಳನ್ನು ನಿರ್ಣಯಕ್ಕಾಗಿ ಆಯೋಗದ ಮುಂದೆ ಮಂಡಿಸತಕ್ಕದ್ದು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪ್ರ7, ಕಾಸೂ 1011. 1000–ಪ್ರತಿಗಳು 2ನೇ ಮಾರ್ಚ್. 2016

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
NINTH SESSION

# *THE KARNATAKA PUBLIC SERVICE COMMISSION (CONDUCT OF BUSINESS AND ADDITIONAL FUNCTIONS) (AMENDMENT) BILL, 2016*

**(L.A. Bill No. 04 of 2016)**

A Bill further to amend the Karnataka Public Service Commission (Conduct of Business and Additional Functions) Act, 1959.

Whereas it is expedient further to amend the Karnataka Public Service Commission (Conduct of Business and Additional Functions) Act, 1959 for the purposes hereinafter appearing;

Be it enacted by the Karnataka State Legislature in the sixty-seventh year of the Republic of India, as follows:-

***1. Short title and commencement.***- (1) This Act may be called the Karnataka Public Service Commission (Conduct of Business and Additional Functions)(Amendment) Act, 2016.

(2) It shall come into force at once.

***2. Amendment of Section 9.***- For section 9 of the Karnataka Public Service Commission (Conduct of Business and Additional Functions) Act 1959, (hereinafter referred to as the principal Act), the following shall be substituted, namely :-

"***9. Quorum.***-The quorum for a meeting of the Commission shall be fifty percent of serving members of the Commission excluding the Chairman, but the presiding officer may adjourn any business at a meeting if, he is of opinion that it cannot conveniently be transacted owing to the non attendance of any member."

***3. Amendment of Section 13.-*** After section 13 of the principal Act, the following proviso shall be inserted, namely:-

"Provided that, in so far as recruitment of Gazetted Probationers is concerned the Interview shall be conducted in such manner and as per such procedure as may be prescribed in the rules governing the rules of recruitment of Gazatted probationers in the State."

## *STATEMENT OF OBJECTS AND REASONS*

It is considered necessary to amend the Karnataka Public Service Commission (Conduct of Business and Additional Functions) Act, 1959 to provide for,-

(a) to fixation of the quorum for a meeting of the Commission excluding the Chairman;

(b) manner of conduct of interview and the procedure to be followed by the commission for recruitment of Gazetted Probationers.

Hence, the Bill.

## FINANCIAL MEMORANDUM

There is no extra financial expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| ***Clause 3:*** | In section 13, the proviso proposed to be inserted empowers the State Government to prescribe by rules the manner and procedure of interview. |

The proposed delegation of Legislative power is normal in character.

***SIDDARAMAIAH***
CHIEF MINISTER

**S. MURTHY**
Secretary (I/C)
Karnataka Legislative Assembly

***ANNEXURE***

## Extract from the Karnataka Public Service Commission (Conduct of Business and Additional Functions) (Amendment) Act, 2015 (Karnataka Act 20 of 1959)

**xx xx xx**

**9. Quorum.**- The quorum for a meeting of the Commission shall be four but the Presiding Officer may adjourn any business at a meeting if he is of opinion that it cannot conveniently be transacted owing to the non-attendance of any Member.

**xx xx xx**

**13. Interviews.**- When candidates for appointments have to be interviewed by the Commission, the interview may be conducted by two or more Members 5 authorised by the Commission, and the results of such interview shall be placed before the Commission for decision.

**xx xx xx**

Government Press, Vikasa Soudha, Bengaluru, P7, W.D., Copies 1000, 1st March, 2016